(ಇಂದು ದಿನಾಂಕಃ 12–09–2025 ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

ಮುಂದುವರೆದ ಪಾಟೀಸವಾಲು ಃ ಶ್ರೀ ಸಿ ಸಿ ಎ ವಕೀಲರಿಂದ ಃ-

3) ದಾವಾ ಆಸ್ತಿ ಸಂಖ್ಯೆ 1557/ಎ 1 ಡಿ ಅದರ ವಿಸ್ತೀರ್ಣ 276 ಚ.ಯಾ. ಇರುತ್ತದೆ. ಪೂರ್ವಕ್ಕೆ ತೋಟದ ಅವರ ಕಟ್ಟಡ, ಪಶ್ಚಿಮಕ್ಕೆ ಸರ್ಕಾರಿ ರಸ್ತೆ, ದಕ್ಷಿಣಕ್ಕೆ 1557/ ಎ 1 ಸಿ ಆಸ್ತಿ ಹಾಗೂ ಉತ್ತರಕ್ಕೆ ನನಗೆ ಮಾರಾಟ ಮಾಡಿದವರ ಆಸ್ತಿ ಇರುತ್ತದೆ. ದಾವಾ ಆಸ್ತಿಗೆ ಮತ್ತು ಸದರಿ ಚಕಬಂದಿಗೆ ವ್ಯತ್ಯಾಸವಿರುತ್ತದೆ ಅಂದರೆ ಸರಿಯಲ್ಲ. ವಾದ ಪತ್ರಕ್ಕೆ ಹಾಗೂ ಸದರಿ ಚಕಬಂದಿಗೆ ಯಾವುದೇ ಹೊಂದಾಣಿಕೆ ಇಲ್ಲಾ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು 2015 ರಲ್ಲಿ ಮಹಮ್ಮದಗೌಡ ಕುದಾಒನ್ ರವರಿಂದ ಖರೀದಿ ಮಾಡಿರುತ್ತೇನೆ. ಖರೀದಿ ಸಮಯದಲ್ಲಿ ದಾವಾ ಆಸ್ತಿಯು ಖುಲ್ಲಾ ಜಾಗವಾಗಿತ್ತು. ದಾವಾ ಆಸ್ತಿಯಲ್ಲಿ ಕಟ್ಟಡ ನಿರ್ಮಾಣ ಮಾಡಿಲ್ಲ ನನ್ನ ಆಸ್ತಿಯಲ್ಲಿ ಕಟ್ಟಡ ನಿರ್ಮಾಣ ಮಾಡಿರುತ್ತೇನೆ. ಸದರಿ ವಿಷಯವನ್ನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯವಕಾಶ ಕೋರಿದ್ದು, ಅಂತಿಮ ಸಮಯವಕಾಶ ನೀಡಲಾಯಿತು.

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)*

**ಓ. ಹೇ. ಕೇ. ಸರಿ. ಇದೆ.**

(ನವೀನ ಎಫ್. ಡಿಸೋಜಾ)

**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**

**ನವಲಗುಂದ.**